
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಬೆಂಗಳೂರು



ನವದೆಹಲಿಯ ಕೇಂದ್ರ ಗಾಂಧಿ ಸ್ಮಾರಕ ನಿಧಿಯ 75ನೇ ವರ್ಷದ ಸಂಸ್ಮರಣೆಗಾಗಿ

ಅಂತರ ರಾಷ್ಟ್ರೀಯ ವಿಚಾರ ಸಂಕಿರಣ

21ನೇ ಶತಮಾನಕ್ಕೆ ಮಹಾತ್ಮ ಗಾಂಧೀಜಿ

ಭವಿಷ್ಯದ ಶಾಂತಿ, ನ್ಯಾಯ, ಸಹೋದರತ್ವ ಮತ್ತು ಸುಸ್ಥಿರ ಅಭಿವೃದ್ಧಿಯ ನಿರ್ಮಾಣಕ್ಕಾಗಿ

24 -25
ಆಗಸ್ಟ್ 2024

ಗಾಂಧಿ ಭವನ
ಕುಮಾರಪಾರ್ಕ್ ಪೂರ್ವ
ಬೆಂಗಳೂರು -560001

ವಿಚಾರ ಸಂಕಿರಣ ಏಕೆ ?

ಗಾಂಧೀ ವಾದ ಮತ್ತು ಇತರೆ ಮಾನವತಾ ವಾದಗಳು ಹಾಗೂ ಪ್ರಕ್ರಿಯೆಗಳ ಹಿನ್ನೆಲೆಯಲ್ಲಿ ಸಮಕಾಲೀನ ಜಾಗತಿಕ ಸವಾಲುಗಳನ್ನು ಅರಿಯುವ ಒಂದು ಪ್ರಯತ್ನ.

ಮಹಾತ್ಮ ಗಾಂಧೀಜಿಯವರು ಆಧುನಿಕ ಮಾನವಕುಲದ ಇತಿಹಾಸದಲ್ಲಿ ಶಾಂತಿ, ನ್ಯಾಯ ಮತ್ತು ವಿಶ್ವ ಸಹೋದರತೆಯ ಮಹಾ ಸಮರ್ಥಕರು. ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯಿಂದ ಭಾರತವನ್ನು ಬಿಡಿಸಿ ಸ್ವಾತಂತ್ರ್ಯ ತಂದುಕೊಡುವಲ್ಲಿ ಇವರು ಪ್ರಖ್ಯಾತ ನಾಯಕರಾದರೂ ನಿಜವಾದ ಅರ್ಥದಲ್ಲಿ ಗಾಂಧೀಜಿಯವರು ಜಗತ್ತಿನ ನಾಗರಿಕರಾಗಿ ವಿಶ್ವಮಾನವರಾಗಿದ್ದರು. ಭಾರತದ ರಾಷ್ಟ್ರೀಯ ವಿಮೋಚನೆಯು ; ಹೊಸ ಉತ್ತಮ ಜಗತ್ತಿನ ನಿರ್ಮಾಣದ ದಿಕ್ಕಿನಲ್ಲಿ ಒಂದು ಅವಿಭಾಜ್ಯ ಅಂಗ ಮತ್ತು ವೇಗವರ್ಧಕ ವಿಷಯ ಎಂದು ಅವರು ಭಾವಿಸಿದ್ದರು.

ಅವರು ಸತ್ಯ ಮತ್ತು ಅಹಿಂಸೆಗಳು ಇಡೀ ಜಗತ್ತಿಗೆ ಪ್ರಸ್ತುತವಾಗುವ ಶಾಶ್ವತ ನೈತಿಕ ಮೂಲಸೂತ್ರಗಳು ಎಂದು ಸಾರಿದ ವೀರಾಗ್ರಣಿ. ಕಳೆದ ಶತಮಾನದ ಎಲ್ಲ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟಗಳ ನಾಯಕರ ಪೈಕಿ ಗಾಂಧೀಜಿ ತಮ್ಮ ಮಾನವೀಯತೆಯ ಅಗತ್ಯತೆ, ಒಗ್ಗಟ್ಟು ,ರಾಷ್ಟ್ರೀಯತೆಯನ್ನು ಮೀರಿದ ಜನಾಂಗ ನೀತಿ, ಧರ್ಮ, ಜಾತಿ ಮತ್ತು ವರ್ಗಗಳ ಎಲ್ಲೆಯನ್ನು ಮೀರಿದ ತಮ್ಮ ಅಚಲ ನಿಷ್ಠೆಯಿಂದಾಗಿ ಭಿನ್ನವಾಗಿ ನಿಲ್ಲುತ್ತಾರೆ.

ಎಪ್ಪತ್ತೈದು ವರ್ಷಗಳ ಹಿಂದೆ ಮತೀಯ ಉಗ್ರಗಾಮಿಯ ಗುಂಡಿಗೆ ಬಲಿಯಾಗಿ ಹುತಾತ್ಮರಾದರು. ಆದರೆ ಅವರ ಚಿಂತನೆ ಮತ್ತು ಆದರ್ಶಗಳು ಇತರೆ ದೇಶ ಮತ್ತು ಸಂಸ್ಕೃತಿಗಳಿಗೆ ಸೇರಿದ ಸಂತರು ಮತ್ತು ಸಾಮಾಜಿಕ ಸುಧಾರಕರ ರೀತಿಯಲ್ಲಿ ಅಮರವಾಗಿವೆ.

ಭಾರತ ಮತ್ತು ಇತರೆ ಜಗತ್ತು ಧಾರ್ಮಿಕ ಅಸಾಮರಸ್ಯದ ಗಂಭೀರ ಅಪಾಯವನ್ನು ಎದುರಿಸುತ್ತಿದ್ದ ಕಾಲದಲ್ಲಿ; ಗಾಂಧೀಜಿಯವರು ಪರಸ್ಪರ ಅರಿತುಕೊಳ್ಳುವ, ಗೌರವಿಸುವ, ನಂಬಿಕೆ ವಿಶ್ವಾಸಗಳಿಂದ, ಶಾಂತಿಯುತ ಸಹಬಾಳ್ವೆ ನಡೆಸಬೇಕು ಎಂದು ಒತ್ತಾಯಿಸುವ ದನಿಯಲ್ಲಿ ನಮ್ಮೊಡನೆ ಮಾತನಾಡುತ್ತಿದ್ದರು. ಜಗತ್ತಿನೊಳಗೆ ಹಾಗೂ ರಾಷ್ಟ್ರಗಳ ನಡುವೆ ತೀವ್ರ ಅಸಮಾನತೆ ತುಂಬಿದ್ದ ಕಾಲದಲ್ಲಿ ಗಾಂಧೀಜಿಯುವರ 'ಸರ್ವೋದಯ' (ಎಲ್ಲರ ಅಭ್ಯುದಯ) ಮತ್ತು 'ಅಂತ್ಯೋದಯ' (ಕಟ್ಟ ಕಡೆಯ ವ್ಯಕ್ತಿಯ ಅಭ್ಯುದಯ) ಪರಿಕಲ್ಪನೆಗಳು ನಮಗೆ ನ್ಯಾಯ ಮತ್ತು ಸಮಾನ ಜಗತ್ತಿನ ಮಾರ್ಗವನ್ನು ತೋರಿಸಿದವು .

ಸಾಮೂಹಿಕವಿನಾಶ ಎಸಗುವ ಅಣ್ವಸ್ತ್ರ ಮತ್ತು ಇತರೆ ಆಯುಧಗಳನ್ನು ಗಾಂಧೀಜಿಯುವರು 'ಮಾನವೀಯತೆಯ ವಿರುದ್ಧದ ಪಾಪಗಳು' ಎಂದು ದಿಟ್ಟವಾಗಿ ಖಂಡಿಸಿದರು. ಈ ಹೇಳಿಕೆಯು ಜಗತ್ತಿನಾದ್ಯಂತ ಶಾಂತಿ ಮತ್ತು ನಿಶ್ಶಸ್ತ್ರೀಕರಣ ಪ್ರಚಾರಕ್ಕೆ ಶಕ್ತಿ ತುಂಬಿತು. ಗಾಂಧೀಜಿ ಸುಸ್ಥಿರ ಅಭಿವೃದ್ಧಿಯ ಹರಿಕಾರರು. "ಭೂಮಿ ತಾಯಿ ಪ್ರತಿಯೊಬ್ಬರ ಅಗತ್ಯವನ್ನು ಪೂರೈಸಬಲ್ಲದೇ ಹೊರತು ಪ್ರತಿಯೊಬ್ಬರ ದುರಾಶೆಯನ್ನು ಈಡೇರಿಸಲಾರದು" ಎನ್ನುವ ಗಾಂಧೀಜಿಯವರ ಉಕ್ತಿಯು ಈಗಿನ ಜಾಗತಿಕ ಹಸಿರು ಚಳವಳಿಯ ಬೀಜ ಮಂತ್ರವಾಗಿದೆ. ಗಾಂಧೀಜಿ ಮಹಿಳೆಯನ್ನು ಪ್ರೀತಿ, ಸುರಕ್ಷತೆ, ಮತ್ತು ಕರುಣೆಯ ಸ್ವರೂಪಿಣಿ ಎಂದು ಬಣ್ಣಿಸಿದ್ದಾರೆ. ಮಾನವ ಜನಾಂಗದ ಭವಿಷ್ಯದ ವಿಕಾಸವನ್ನು ಮಹಿಳೆಯರೇ ಮುನ್ನಡೆಸಲಿದ್ದಾರೆ ಎಂದು ಭವಿಷ್ಯ ನುಡಿದಿದ್ದಾರೆ .

ಮಾನವ ಸುರಕ್ಷತೆಗೆ ಸಂಬಂಧಿಸಿದ ಶಿಕ್ಷಣ, ಅರೋಗ್ಯರಕ್ಷಣೆ, ಪೌಷ್ಟಿಕಾಂಶ, ನೈರ್ಮಲ್ಯ, ಗ್ರಾಮೀಣ ಕೈಗಾರಿಕೆ. ಇತ್ಯಾದಿ ಕ್ಷೇತ್ರಗಳಲ್ಲಿ ಗಾಂಧೀಜಿ ನಿರ್ಣಾಯಕ ಪ್ರಯೋಗಗಳನ್ನು ನಡೆಸಿದ್ದಾರೆ. ಇಂದು ಕಾಲ ಬದಲಾಗಿದ್ದರೂ ಅವರ ಪ್ರಯೋಗಗಳ ಮೂಲಸಾರವು ನಮ್ಮ ಜಗತ್ತಿಗೆ ಪ್ರಮುಖ ಪಾಠಗಳನ್ನು ಕಲಿಸಿದೆ. ಗಾಂಧಿ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ವಿರೋಧಿಸುತ್ತಿದ್ದರು ಎನ್ನುವ ತಪ್ಪು ಕಲ್ಪನೆ ವ್ಯಾಪಕವಾಗಿ ಹಬ್ಬಿದೆ. ಆದರೆ ಇದು ಸತ್ಯವಲ್ಲ. ಅವರುಪ್ರೀತಿ ಪ್ರಣಯ, ವೈಜ್ಞಾನಿಕ ಜ್ಞಾನ ಮತ್ತು ತಾಂತ್ರಿಕ ಆವಿಷ್ಕಾರಗಳ ಪ್ರತಿಪಾದಕರಾಗಿದ್ದರು. ಇವು ಮಾನವೀಯತೆಯ ತೊಂದರೆಗಳನ್ನು ನಿವಾರಿಸುತ್ತವೆ ; ಜಗತ್ತಿನ ನಿಗೂಢತೆಯ ಹಿಂದೆ ಅಡಗಿರುವ ಸತ್ಯವನ್ನು ಹುಡುಕಲು ನೆರವಾಗುತ್ತವೆ ಎನ್ನುವ ಬಗ್ಗೆ ಅವರಿಗೆ ಅಪರಿಮಿತ ವಿಶ್ವಾಸವಿತ್ತು . "ಪ್ರತಿಯೊಂದನ್ನೂ ವಿಜ್ಞಾನವನ್ನಾಗಿ ಅಥವಾ ಪ್ರಣಯವನ್ನಾಗಿ ಪರಿವರ್ತಿಸಿ ಕೊಳ್ಳಬಹುದು" ಎಂದು ಗಾಂಧಿ ಹೇಳಿದ್ದಾರೆ. ಇದು ವಿಜ್ಞಾನ ಮತ್ತು ತಾಂತ್ರಿಕತೆಯನ್ನು ಅನೈತಿಕವಾಗಿ ಮತ್ತು ವಿಚ್ಛಿದ್ರಕಾರಕವಾಗಿ ಬಳಸಿಕೊಳ್ಳುವುದರ ವಿರುದ್ಧ ಗಾಂಧೀಜಿಯವರು ನೀಡಿದ ಎಚ್ಚರಿಕೆಯಾಗಿತ್ತು. 21ನೇ ಶತಮಾನವು ಕ್ರಾಂತಿಕಾರಿ ತಂತ್ರಜ್ಞಾನಗಳಾದ ಕೃತಕ ಬುದ್ದಿವಂತಿಕೆ, ರೊಬೊಟಿಕ್ಸ್, ತಳಿ ವಿಜ್ಞಾನಗಳ ಮೂಲಕ ರೂಪಿತಗೊಳ್ಳಲಿರುವುದರಿಂದ ಇವುಗಳ ಸಾಧ್ಯತೆ ಮತ್ತು ಅಪಾಯಗಳ ಬಗ್ಗೆ ಅರಿತುಕೊಳ್ಳುವ ಅಗತ್ಯವಿದೆ.

ಗಾಂಧೀಜಿಯವರ ಬಗ್ಗೆ ಇನ್ನೊಂದು ಅಪಪ್ರಚಾರ ವಿಪರೀತವಾಗಿ ಹಬ್ಬುತ್ತಿದೆ. ಗಾಂಧೀಜಿಯವರು ಸ್ವದೇಶೀ (ರಾಷ್ಟ್ರೀಯ ಸ್ವಾವಲಂಬನೆ) ಆಂದೋಲನದ ರೂವಾರಿ. ಹೀಗಾಗಿ ಅವರು ಅಂತರರಾಷ್ಟ್ರೀಯ ಸಹಕಾರವನ್ನು ಅಪೇಕ್ಷಿಸುವುದಿಲ್ಲ ಎನ್ನುವ ಅಪಪ್ರಚಾರ ವಿಪರೀತವಾಗಿ ಹಬ್ಬಿದೆ. ಇದು ನಿಜವಲ್ಲ. ಅವರು ಸ್ಥಳೀಯತೆ ಮತ್ತು ಜಾಗತಿಕತೆಯನ್ನು ಸಮತೋಲನಗೊಳಿಸಲು ಬಯಸುತ್ತಿದ್ದರು. ರಾಷ್ಟಗಳ ನಡುವೆ ಪರಸ್ಪರ ಅವಲಂಬನೆ ರಾಷ್ಟಗಳ ಸ್ವಾಲಂಬನೆಯಷ್ಟೇ ಅಗತ್ಯ ಎನ್ನುವುದು ಅವರ ಆಶಯವಾಗಿತ್ತು .

ಗಾಂಧಿ ಅತ್ಯಂತ ಜನತಂತ್ರವಾದಿಯಾಗಿದ್ದರು. ತಮ್ಮ ಮೂಲ ಬದ್ಧತೆಗಳ ಬಗ್ಗೆ ಅವರಿಗೆ ಅಚಲ ನಿಷ್ಠೆ ಇದ್ದಾಗಿಯೂ ಅವರು ಎಂದೂ ಕಟ್ಟಾ ಸಿದ್ದಾಂತಿಯಾಗಿರಲಿಲ್ಲ. ಹೊಸ ಸನ್ನಿವೇಶಗಳಿಂದ ಮತ್ತು ಇತರರ ದೃಷ್ಟಿಕೋನದಿಂದ ಕಲಿಯಲು ಅವರು ಸದಾ ಮುಕ್ತವಾಗಿರುತ್ತಿದ್ದರು. ಅವರ ವಿರೋಧಿಗಳೆನಿಸಿಕೊಂಡವರ ಬಗ್ಗೆಯೂ ಅವರಿಗೆ ಆಂತರ್ಯದಲ್ಲಿ ಗೌರವವಿರುತ್ತಿತ್ತು. ಯಾವುದೇ ದುರುದ್ದೇಶ ಅಥವಾ ಅಹಂ ಇಟ್ಟುಕೊಳ್ಳದೆ ಅವರೊಡನೆ ಚರ್ಚೆ ಮತ್ತು ಸಂವಾದ ನಡೆಸುತ್ತಿದ್ದರು. ಜಗತ್ತಿನಾದ್ಯಂತ ಜನತಂತ್ರ ವ್ಯವಸ್ಥೆಯಲ್ಲಿ ಭಿನ್ನಮತ ಮತ್ತು ಆರೋಗ್ಯಕರ ಚರ್ಚೆಗಳ ಅವಕಾಶ ಕುಗ್ಗುತ್ತಿರುವ ಈ ಸಮಯದಲ್ಲಿ ಗಾಂಧಿವಾದದ ಪರಂಪರೆಯನ್ನು ಪುನರುಜ್ಜೀವನಗೊಳಿಸುವುದು ಅತ್ಯಗತ್ಯವಾಗಿದೆ.

ಮೇಲೆ ಹೇಳಿದ ಈ ಎಲ್ಲಾ ಚಿಂತನೆಗಳು ಮತ್ತು ಕಾಳಜಿಗಳು 21ನೇ ಶತಮಾನದಲ್ಲಿನ ಮಾನವೀಯತೆಯ ಸವಾಲುಗಳು ಮತ್ತು ಅಗತ್ಯಗಳನ್ನು ಪ್ರತಿಧ್ವನಿಸುತ್ತವೆ. ಆದ್ದರಿಂದ ಇವೆಲ್ಲವನ್ನೂ ಒಗ್ಗೂಡಿಸಿ ದೇಶ ವಿದೇಶಗಳ ಚಿಂತನೆಗಳನ್ನು ಮತ್ತು ಚಿಂತಕರನ್ನು ಸೇರಿಸಿ ಚರ್ಚೆ ಮತ್ತು ಸಂವಾದ ನಡೆಸುವುದು ಅಗತ್ಯವಾಗಿದೆ. ಈ ಅಂತರ ರಾಷ್ಟ್ರೀಯ ವಿಚಾರ ಸಂಕಿರಣವು ಈ ನಿಟ್ಟಿನಲ್ಲಿ ಪ್ರಯತ್ನಿಸಲಿದೆ.

ಈ ವಿಚಾರ ಸಂಕಿರಣವು ಮಹಾತ್ಮ ಗಾಂಧೀಜಿಯವರ ಚಿಂತನೆಗಳು ಮತ್ತು ಆಚರಣೆಗಳನ್ನು ಕೇಂದ್ರೀಕರಿಸಿದ್ದರೂ ಭಿನ್ನ ವಿಚಾರಗಳು, ದೃಷ್ಟಿಕೋನಗಳು ಮತ್ತು ಗಂಭೀರ ಚರ್ಚೆಗಳಿಗೆ ವಿಶಾಲ ವೇದಿಕೆಯನ್ನು ಕಲ್ಪಿಸಲಿದೆ. ಆದ್ದರಿಂದ ಈ ವಿಚಾರ ಸಂಕಿರಣವು ಎಲ್ಲರಿಗೂ ಅರ್ಥಪೂರ್ಣ ಮತ್ತು ಫಲದಾಯಕವಾಗಲಿದೆ ಎಂದು ನಾವು ನಂಬಿದ್ದೇವೆ .

ಗಾಂಧಿ ಸ್ಮಾರಕ ನಿಧಿ

ಜನವರಿ 30, 1948 ರಂದು ಮಹಾತ್ಮ ಗಾಂಧಿ ಹುತಾತ್ಮರಾದ ನಂತರ ರಾಷ್ಟ್ರಪಿತನ ಚಿಂತನೆ ಮತ್ತು ಆದರ್ಶಗಳನ್ನು ಚಿರಸ್ಥಾಯಿಗೊಳಿಸಲು ಭಾರತ ಸರ್ಕಾರವು ನಿರ್ಧರಿಸಿತು. ಈ ಉದ್ದೇಶ ಈಡೇರಿಕೆಗಾಗಿ ರಾಜಕೀಯೇತರವಾದ ನಾಗರೀಕ ಟ್ರಸ್ಟ್ ಸ್ಥಾಪಿಸಿ ಅದಕ್ಕೆ ಬೆಂಬಲ ನೀಡಲು ನಿರ್ಧರಿಸಿತು. ಅದರಂತೆ 1949 ರಲ್ಲಿ ಗಾಂಧಿ ಸ್ಮಾರಕ ನಿಧಿಯನ್ನು ಒಂದು ಸ್ವಾಯತ್ತ ಸಂಸ್ಥೆಯನ್ನಾಗಿ ರಚಿಸಿತು.

ಭಾರತದ ಪ್ರಥಮ ರಾಷ್ಟ್ರಪತಿ ಡಾ. ಬಾಬು ರಾಜೇಂದ್ರ ಪ್ರಸಾದ್ ಟ್ರಸ್ಟ್ ನ ಸಂಸ್ಥಾಪಕ ಅಧ್ಯಕ್ಷರಾದರು. ಪ್ರಧಾನಿ ಪಂಡಿತ್ ಜವಾಹರ್‌ಲಾಲ್ ನೆಹರು ಮತ್ತು ಉಪಪ್ರಧಾನಿ ಸರ್ದಾರ್ ವಲ್ಲಭ ಬಾಯ್ ಪಟೇಲ್ ಇವರಿಬ್ಬರೂ ಉಪಾಧ್ಯಕ್ಷರಾದರು. ಮೌಲಾನಾ ಅಬ್ದುಲ್ ಕಲಾಂ ಅಜಾದ್, ಪಂಡಿತ್ ಗೋವಿಂದ ವಲ್ಲಭ ಪಂಥ್, ಆಚಾರ್ಯ ಕೃಪಲಾನಿ, ಜಗಜೀವನ್ ರಾಮ್, ಜಿ ವಿ ಮಾವಲಂಕರ್, ಜೆ ಆರ್ ಡಿ ಟಾಟಾ ಮತ್ತು ಯಶೋಧರಾ ದಾಸಪ್ಪ ಹಾಗೂ ಇನ್ನೂ ಹಲವು ಪ್ರಮುಖರು ಟ್ರಸ್ಟನಲ್ಲಿ ಇತರ ಸದಸ್ಯರಾಗಿದ್ದರು.

ಗಾಂಧಿ ಸ್ಮಾರಕ ನಿಧಿಯ ಶಾಖೆಗಳು ಭಾರತದ ಎಲ್ಲ ರಾಜ್ಯಗಳಲ್ಲಿವೆ. ಆಯಾ ರಾಜ್ಯಗಳಲ್ಲಿನ ರಾಜಧಾನಿಯಲ್ಲಿ ಇದರ ಶಾಖೆಗಳಿವೆ. ಇವು ಸ್ವತಂತ್ರವಾಗಿ ಜನತಂತ್ರಾತ್ಮಕವಾಗಿ ಆಯ್ಕೆಯಾದ ಆಡಳಿತ ಮಂಡಳಿಯಿಂದ ನಿರ್ವಹಿಸುತ್ತಿವೆ. 1948ರಲ್ಲಿ ಸ್ಥಾಪನೆಯಾದ ಗಾಂಧಿ ಸ್ಮಾರಕ ನಿಧಿಗೆ ಈಗ 75 ವರ್ಷಗಳು ತುಂಬಿವೆ. ಕರ್ನಾಟಕದಲ್ಲಿ ಖ್ಯಾತ ಶಿಕ್ಷಣ ತಜ್ಞ ಡಾ ವೂಡೇ ಪಿ ಕೃಷ್ಣ ಅವರು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿದ್ದಾರೆ.